**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 84/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.03**

**ದಿನಾಂಕಃ 23.12.2025** **ಸಿಡಬ್ಲ್ಯೂ.03**

| | |
|---|---|
| ಹೆಸರು | ರಾಘವೇಂದ್ರ |
| ತಂದೆ ಹೆಸರು | ಚಂದ್ರಪ್ಪ |
| ವಯಸ್ಸು | 27 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಹಳೇ ಹರ್ಲಾಪುರ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ. 2 ರವರ ಪರಿಚಯವಿದೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು ಅದು ಪಂಚರಿಗೆ ನೀಡಿದ ನೋಟಿಸ್ ಆಗಿದ್ದು ಅದನ್ನು ನಿಪಿ.6 ಎಂದು ಸಾಕ್ಷಿಯು ಗುರುತಿಸಿದ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು ಅದು ಕೃತ್ಯ ನಡೆದ ಸ್ಥಳ ಮತ್ತು ಅಮಾನತು ಪಂಚನಾಮೆ ಆಗಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಿದ್ದು ಸಾಕ್ಷಿಯು ಗುರುತಿಸಿದ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2 ವರೆ ವರ್ಷಗಳ ಹಿಂದೆ ಹರಿಹರ ಠಾಣಾ ಪಕ್ಕದಲ್ಲಿರುವ ಹೋಟೆಲ್ ಹತ್ತಿರ ಸಹಿ ಮಾಡಿರುತ್ತೇನೆ. ಯಾವ ಕಾರಣಕ್ಕಾಗಿ ಸಹಿ ಮಾಡಿದ್ದೇನೆ ಎಂದು ಗೊತ್ತಿಲ್ಲ. ಸದರಿ ಸಂದರ್ಭದಲ್ಲಿ ನನ್ನೊಂದಿಗೆ ಯಾರು ಇರಲಿಲ್ಲ. ಸಾಕ್ಷಿಗೆ ಛಾಯ ಚಿತ್ರ ತೋರಿಸಲಾಗಿ ಅದರಲ್ಲಿ ತಾವು ಇರುವುದಾಗಿ ಗುರುತಿಸಿರುತ್ತಾರೆ. ಸದರಿ ಛಾಯ ಚಿತ್ರಗಳನ್ನು ಈಗಾಗಲೇ ನಿಪಿ. 3 ಮತ್ತು 4 ಎಂದು ಗುರುತಿಸಲಾಗಿದೆ. ಸದರಿ ಛಾಯ ಚಿತ್ರಗಳನ್ನು ಎಲ್ಲಿ ಯಾವ ಕಾರಣಕ್ಕಾಗಿ ತೆಗದಿರುತ್ತಾರೆ ಎಂದು ನನಗೆ ನೆನಪಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತು ಪಡಿಸಿಕೊಂಡಿಲ್ಲ. ನನಗೆ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ದಿಃ 15.10.2022 ರಂದು ಹರಿಹರ ತಾಲೂಕು ಗುತ್ತೂರು ಗ್ರಾಮದ ಗಣೇಶ ದೇವಸ್ಥಾನದ ಹತ್ತಿರದ ಹರಿಹರ ಹರಪನಹಳ್ಳಿ ರಸ್ತೆಯಲ್ಲಿ ನನಗೂ ಮತ್ತು ಚಾಸಾ.2 ರವರಿಗೆ ಪೊಲೀಸರು ಪಡಿತರ

ರಾಗಿಯನ್ನು ಜಪ್ತು ಪಡಿಸಿಕೊಳ್ಳಬೇಕು ಎಂದು ನೋಟಿಸ್ ನೀಡಿ ಪಂಚರಾಗಲು ಸಹಕರಿಸಲು ಕೇಳಿಕೊಂಡ ಮೇರೆಗೆ ಒಪ್ಪಿ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಹಾಗೂ ಚಾಸಾ.2 ರವರ ಸಮಕ್ಷಮ 4 ಪ್ಲಾಸ್ಟಿಕ್ ಚೀಲಗಳಲ್ಲಿನ ಒಟ್ಟು 145 ಕೆಜಿ ಪಡಿತರ ರಾಗಿಯನ್ನು ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ರಾಗಿಯಲ್ಲಿ ತಲಾ 1 ಚೀಲದಿಂದ ತಲಾ 1 ಕೆಜಿಯಂತೆ 4 ಕೆಜಿ ರಾಗಿಯನ್ನು ಮಾದರಿ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪೊಲೀಸರು ಕೃತ್ಯಕ್ಕೆ ಬಳಸಿದ ಕೆಎ/17 ಹೆಚ್ ಎಲ್ 5009 ಟಿವಿಎಸ್ ಎಕ್ಸೆಲ್ ಬೈಕನ್ನು ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವುಗಳನ್ನು ನನ್ನ ಸಮಕ್ಷಮ 7.30 ರಿಂದ 8.50 ರವರೆಗೆ ಪಂಚನಾಮೆ ಜರುಗಿಸಿ ವಶಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಂದರ್ಭದಲ್ಲಿ ಪ್ರಕರಣದ ಆರೋಪಿ ಹಾಜರಿದ್ದರು ಎಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎನ್ ಬಿ ವಕೀಲರಿಂದಃ**

ನಿಪಿ.2 ರಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಗ್ರಾಮಾಂತರ ಠಾಣೆಯ ಪಕ್ಕ ನನ್ನ ಹೋಟೆಲ್ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಹೋಟೆಲ್ ನಲ್ಲಿ ಕೆಲಸ ಮಾಡುತ್ತೇನೆ ಎಂದು ನುಡಿಯುತ್ತಾರೆ. ಪೊಲೀಸರು ಸಹಿ ಮಾಡು ಎಂದ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ